# ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು-560 001.

**ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು-560 001 ಇದರ 2020-2021ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 31.10.2021 ನೇ ಭಾನುವಾರ ಬೆಳಗ್ಗೆ 10.30 ಗಂಟೆಗೆ, ಸಿಟಿ ಸಿವಿಲ್ ನ್ಯಾಯಾಲಯದ ಆವರಣದಲ್ಲಿರುವ ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತದ ಶಾಖೆ, ಕೆಂಪೇಗೌಡ ರಸ್ತೆ, ಬೆಂಗಳೂರು-560009 ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಸೊಣ್ಣೇಗೌಡ.ಎನ್.ಎಂ ರವರ ಅಧ್ಯಕ್ಷತೆಯಲ್ಲಿ ನಡೆದ 22 ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳು.**

| | | |
|---|---|---|
| **ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ** | **-** | **8040** |
| **ಉಪನಿಯಮಗಳಂತೆ ಸಭೆಯ ಕೋರಂಗೆ** | | |
| **ಅವಶ್ಯಕವಾದ ಸದಸ್ಯರ ಸಂಖ್ಯೆ** | **-** | **0804** |
| **ಸಭೆಗೆ ಹಾಜರಾಗಿದ್ದ ಸದಸ್ಯರ ಸಂಖ್ಯೆ** | **-** | **01824** |

**(ಸಭೆಗೆ ಹಾಜರಾದ ಮಾನ್ಯ ಸದಸ್ಯರುಗಳ ಸಹಿಯನ್ನು ಪ್ರತ್ಯೇಕವಾಗಿ ಇರಿಸಿರುವ ಪುಸ್ತಕದಲ್ಲಿ ಪಡೆಯಲಾಗಿದೆ).**

ನಿರ್ದೇಶಕರಾದ ಶ್ರೀ.ಪ್ರಕಾಶ.ಜೆ.ವಿ ರವರು ನಿರೂಪಕರಾಗಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ದಿವಂಗತ ಶ್ರೀ.ಹೆಚ್.ಕೆ.ವಾಸುದೇವರೆಡ್ಡಿಯವರನ್ನು ಸ್ಮರಿಸುತ್ತಾ, ಬ್ಯಾಂಕಿನ ಬೆಳವಣಿಗೆಯನ್ನು ವರ್ಣಿಸುತ್ತಾ ಸದಸ್ಯರ ಮತ್ತು ಗ್ರಾಹಕರ ಶ್ರಮದಿಂದ ಈ ವರ್ಷ 3.31ಕೋಟಿ ಲಾಭ ಪಡೆದಿದೆ, ಬ್ಯಾಂಕಿನ ಅಭಿವೃದ್ಧಿಯು ಹಂತ ಹಂತವಾಗಿ ಬೆಳೆಯಲು ಎಲ್ಲಾ ಅಧ್ಯಕ್ಷರುಗಳಿಗೂ ಅಭಿನಂದನೆಯನ್ನು ಸಲ್ಲಿಸಿದರು ಅದೇ ರೀತಿ ಕನ್ನಡದ ಖ್ಯಾತನಟ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಮರಣಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಸಭೆಯನ್ನು ಪ್ರಾರಂಭಿಸಿದರು.

ಸದಸ್ಯರಾದ ಶ್ರೀ ಶ್ರೀನಿವಾಸಮೂರ್ತಿ ರವರ ಪ್ರಾರ್ಥನೆಯೊಂದಿಗೆ ಬೆಳಗ್ಗೆ 10.30 ಗಂಟೆಗೆ ಸರ್ವಸದಸ್ಯರ ಸಭೆಯನ್ನು ಪ್ರಾರಂಭಿಸಲಾಯಿತು.

ಸರ್ವಸದಸ್ಯರ ಸಭೆಗೆ ಆಗಮಿಸಿರುವ ಬ್ಯಾಂಕಿನ ಅಧ್ಯಕ್ಷರಿಗೆ, ನಿರ್ದೇಶಕರಿಗೆ, ಸದಸ್ಯರುಗಳಿಗೆ ಹಾಗೂ ಪ್ರತಿಭಾ ಪುರಸ್ಕಾರ ಪಡೆಯಲು ಬಂದಿರುವ ವಿದ್ಯಾರ್ಥಿಗಳಿಗೆ ಹಾಗೂ ವಕೀಲ ಮಿತ್ರರಿಗೆ ನಿರ್ದೇಶಕರಾದ ಶ್ರೀ.ನಾಯಕ್.ಎನ್.ಆರ್ ರವರು ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು. ಬ್ಯಾಂಕು ಆರಂಭಿಕ ಹಂತದಿಂದ ಬೆಳೆಯುತ್ತಾ ಬಂದಂತಹ ವಿಚಾರವನ್ನು ಪ್ರಸ್ತಾಪಿಸುತ್ತಾ ಬ್ಯಾಂಕಿನಿಂದ ಲಭ್ಯವಾಗುತ್ತಿರುವ ಸವಲತ್ತುಗಳನ್ನು ಸರ್ವ ಸದಸ್ಯರು ಪ್ರಯೋಜನ ಪಡೆದುಕೊಳ್ಳಬೇಕು, ಪ್ರತಿಭಾ ಪುರಸ್ಕಾರ ಪಡೆಯುವ ಎಲ್ಲಾ ವಿದ್ಯಾರ್ಥಿಗಳು ವಕೀಲ ವೃತ್ತಿಯನ್ನು ಗೌರವ ಪ್ರತಿಷ್ಟೆಯಿಂದ ಬೆಳೆಸಲು ವಕೀಲ ವೃತ್ತಿಯನ್ನು ಆಯ್ದುಕೊಳ್ಳಬೇಕು. ಸಮಾಜದಲ್ಲಿರುವ ವಕೀಲರ ಸ್ಥಾನಮಾನವನ್ನು ಮನಗಾಣುವಂತೆ ಪುರಸ್ಕಾರ ತೆಗೆದುಕೊಂಡ ಮಕ್ಕಳಿಗೂ ತಿಳಿಸಿದರು. ತಾವುಗಳು ವಕೀಲ ವೃತ್ತಿಗೆ ಆಗಮಿಸಬೇಕಾಗಿ ಮನವಿ ಮಾಡಿಕೊಂಡರು. ಜೊತೆಗೆ ವಕೀಲರ ಸಂಘ, ವಕೀಲರ ಸಹಕಾರ ಸಂಘ, ವಕೀಲರ ಸಾಹಿತ್ಯ ಕೂಟದ ಎಲ್ಲಾ ಪದಾದಿಕಾರಿಗಳಿಗೂ ಪ್ರೀತಿ ಪೂರ್ವಕ ಸ್ವಾಗತವನ್ನು ಕೋರಿದರು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಸೊಣ್ಣೇಗೌಡ.ಎನ್.ಎಂ ರವರು ವಕೀಲರ ಸಂಘದ ಎಲ್ಲಾ ಅಧ್ಯಕ್ಷರಿಗೂ ಹಾಗೂ ಪಧಾಧಿಕಾರಿಗಳಿಗೂ ಸ್ವಾಗತವನ್ನು ಕೋರಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ.ದಿವಾಕರ್.ಎನ್.ರವರು ವರದಿ ಸಾಲಿನಲ್ಲಿ ಮರಣ ಹೊಂದಿದವರ ಪಟ್ಟಿಯನ್ನು ಓದಿದರು ಹಾಗೂ ಮರಣ ಹೊಂದಿದ ಸದಸ್ಯರುಗಳಿಗೆ ಹಾಗೂ ಕನ್ನಡದ ಖ್ಯಾತನಟ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಮರಣಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಅವರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನಾಚರಣೆ ಮಾಡಲು ಸಭೆಯನ್ನು ಕೋರಿದರು ಹಾಗೂ ಸಭೆಯಲ್ಲಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ನಂತರ ಪ್ರಧಾನ ವ್ಯವಸ್ಥಾಪಕರು ಪ್ರಭಾರ ಶ್ರೀ ಪ್ರಸನ್ನ.ಡಿ.ಆರ್ ರವರು ಕಾರ್ಯಕ್ರಮ ಪಟ್ಟಿಯ ನಾಲ್ಕನೇ ಕಾರ್ಯಕ್ರಮ ಸೂಚಿಯಂತೆ ಸರ್ವ ಸದಸ್ಯರ ಸಭೆಯ ನೋಟೀಸನ್ನು ಸಭೆಯಲ್ಲಿ ಓದಿದ ನಂತರ, ಸಭೆಯು ಅನುಮೋದನೆ ನೀಡಿ ನೋಟಿಸನ್ನು ದಾಖಲಿಸಲಾಯಿತು.

ನಂತರ ಬ್ಯಾಂಕಿನ ನಿರ್ದೇಶಕರಾದ ಶ್ರೀ.ಪ್ರಕಾಶ.ಜೆ.ವಿ ರವರು ಕಾರ್ಯಕ್ರಮ ಪಟ್ಟಿ 5 ರಲ್ಲಿ ಸೂಚಿಸಿರುವಂತೆ ಬ್ಯಾಂಕಿನ 2019-2020ನೇ ಸಾಲಿನ ಮಾಹಾಸಭೆಯ ನಡವಳಿಕೆಗಳನ್ನು ದಾಖಲು ಮಾಡುವುದರ ಬಗ್ಗೆ ಸಭೆಯ ಅನುಮತಿಯನ್ನು ಕೋರಿದರು ಅದಕ್ಕೆ ಸದಸ್ಯರಾದ ಭಕ್ತವತ್ಸಲ ರವರು ವಿಷಯಗಳನ್ನು ಒಪ್ಪಬಹುದೆಂದು ಸೂಚಿಸಿದರು. ಶ್ರೀ ಪುಟ್ಟರಾಜು ರವರು ಅನುಮೋದಿಸಿದರು. ನಂತರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಸರ್ವಸದಸ್ಯರ ಸಭೆಯಲ್ಲಿ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಬ್ಯಾಂಕಿನ ಅಭಿವೃದ್ಧಿಯ ಹಿನ್ನಲೆಯಲ್ಲಿ ಸೂಕ್ತವಾದ ಸಲಹೆ, ಮಾರ್ಗದರ್ಶನ ಹಾಗೂ ಸೂಚನೆಗಳನ್ನು ನೀಡಬೇಕೆಂದು ಆಡಳಿತ ಮಂಡಳಿಯ ಪರವಾಗಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ. ಶ್ರೀನಿವಾಸರೆಡ್ಡಿ.ಎಂ.ವಿ ರವರು ಮಾನ್ಯ ಸದಸ್ಯರನ್ನು ಕೋರುತ್ತಾ ಬ್ಯಾಂಕಿನ 2020-2021 ನೇ ಸಾಲಿನ ಬ್ಯಾಂಕಿನ ಆಡಳಿತ ವರದಿಯನ್ನು ಸಂಪೂರ್ಣವಾಗಿ ಮಂಡಿಸಿದರು. ನಂತರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ನಂತರ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ.ರಮೇಶ್ ಬಾಬು ರವರು ಮಾತನಾಡುತ್ತಾ ಬ್ಯಾಂಕು 21 ವಸಂತಗಳನ್ನು ಪೂರೈಸಿದ್ದು ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ.ವಾಸುದೇವರೆಡ್ಡಿ ಹೆಚ್.ಕೆ ಹಾಗೂ ನ್ಯಾಯಮೂರ್ತಿಗಳಾದ ಶ್ರೀ.ವೆಂಕಟರಾಮಯ್ಯರವರನ್ನು ನೆನಪು ಮಾಡಿಕೊಳ್ಳುತ್ತಾ ಬ್ಯಾಂಕು ಪ್ರಾರಂಭದಲ್ಲಿ 5 ಲಕ್ಷ ಸಾಲ ನೀಡುತ್ತಿದ್ದು ಹಾಲಿ 2 ಕೋಟಿಗಳವರೆಗೆ ಸದಸ್ಯರಿಗೆ ಸಾಲವನ್ನು ನೀಡುವ ಹಂತಕ್ಕೆ ಬಂದಿದೆ. ಪ್ರಾರಂಭದಲ್ಲಿ ಶೇ.6ರಂತೆ ಡಿವಿಡೆಂಡ್‌ನ್ನು ಸದಸ್ಯರಿಗೆ ನೀಡುತ್ತಾ ಹಾಲಿ ಸದಸ್ಯರಿಗೆ ಶೇ.15ರಂತೆ ಡಿವಿಡೆಂಡ್ ನೀಡಲಾಗುತ್ತಿದೆ. ಸಾಲ ವಸೂಲಾತಿಯಲ್ಲಿ ನಮ್ಮ ಬ್ಯಾಂಕು ಪ್ರಥಮ ಸ್ಥಾನದಲ್ಲಿದೆ ಹಾಗೂ ವಕೀಲರಿಗೆ ಇರುವಂತಹ ಬ್ಯಾಂಕು ಇಡೀ ಭಾರತದಲ್ಲಿ ನಮ್ಮ ನ್ಯಾಯಮಿತ್ರ ಸಹಕಾರಿ ಬ್ಯಾಂಕು ಒಂದೇ ಎಂದು ತಿಳಿಸಿದರು. ಹಾಲಿ 135 ಕೋಟಿಗೂ ಅಧಿಕ ಠೇವಣಿಯನ್ನು ಹೊಂದಿದ್ದು ಇದರ ಜೊತೆಗೆ 1000ಕೋಟಿಗೂ ಹೆಚ್ಚು ವಹಿವಾಟನ್ನು ನಡೆಸುತ್ತಾ ಬಂದಿದೆ. 2019-2020ರಲ್ಲಿ ಕೋವಿಡ್ ಇದ್ದದ್ದರಿಂದ ವರ್ಚುಯಲ್ ಮೀಂಟಿಂಗ್ ಮುಖಾಂತರ ವಾರ್ಷಿಕ ಸಭೆಯನ್ನು ನಡೆಸಲಾಯಿತು. ಈ ವರ್ಷ ಪ್ರತಿಭಾ ಪುರಸ್ಕಾರವನ್ನು ಎರಡು ಸಾಲುಗಳಿಗೂ ನೀಡುತ್ತಿದ್ದು ಪ್ರತಿಭಾ ಪುರಸ್ಕಾರಕ್ಕೆ ಬಂದಿರುವಂತಹ ಎಲ್ಲಾ ವಕೀಲ ಮಿತ್ರರಿಗೂ ಹಾಗೂ ಅವರ ಮಕ್ಕಳಿಗೂ ಸ್ವಾಗತವನ್ನು ಕೋರಿದರು.

ನಿರ್ದೇಶಕರಾದ ಶ್ರೀ.ಪ್ರಕಾಶ.ಜೆ.ವಿ ರವರು ಕಾರ್ಯಕ್ರಮ ಸೂಚಿಯಂತೆ ವಿಷಯ 07 ತೆಗೆದುಕೊಳ್ಳಲು ಸರ್ವಸದಸ್ಯರ ಸಭೆಯ ಅನುಮತಿಯನ್ನು ಕೋರಿದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿಸುತ್ತಾ ಎಲ್ಲಾ ವಿಷಯಗಳನ್ನು ಒಟ್ಟಾಗಿ ಚರ್ಚೆಗೆ ಮಂಡಿಸಲಾಯಿತು. ಜೊತೆಗೆ ವಿಷಯ 7ಕ್ಕೆ ಸಂಬಂದಪಟ್ಟಂತೆ ಮೊದಲಿಗೆ 2020-2021ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯ್ತು. ನಂತರ ಸಭೆಯ ಅನುಮತಿಯೊಂದಿಗೆ 2019-2020ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ನಿರ್ದೇಶಕರಾದ ಶ್ರೀ.ಪ್ರಕಾಶ.ಜೆ.ವಿ ರವರು ಕಾರ್ಯಕ್ರಮ ಸೂಚಿಯಂತೆ ವಿಷಯ 08 ರಿಂದ 10 ರವರೆಗೆ ವಿಷಯಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲು ಸರ್ವಸದಸ್ಯರ ಸಭೆಯ ಅನುಮತಿಯನ್ನು ಕೋರಿದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿಸುತ್ತಾ ಎಲ್ಲಾ ವಿಷಯಗಳನ್ನು ಒಟ್ಟಾಗಿ ಚರ್ಚೆಗೆ ಮಂಡಿಸಲಾಯಿತು.

1. **ಶ್ರೀ ರಂಗನಾಥ್.ಎ.ಪಿ** ರವರು ಮಾತನಾಡುತ್ತಾ ಬ್ಯಾಂಕು ಈ ಬಾರಿ ಬ್ಯಾಂಕು ರೂ.3.32ಕೋಟಿಯಷ್ಟು ಲಾಭಗಳಿಸಿರುವುದಕ್ಕೆ ಅಭಿನಂದನೆಯನ್ನು ವ್ಯಕ್ತಪಡಿಸಿದರು. ಅದೇ ರೀತಿ ಬ್ಯಾಂಕಿನ ಅಧ್ಯಕ್ಷರು ಬಿಡಿಸಿಸಿ ಬ್ಯಾಂಕಿನಲ್ಲಿ

ನಿರ್ದೇಶಕರಾಗಿರುವುದಕ್ಕೆ ಅಭಿನಂದನೆಯನ್ನು ತಿಳಿಸಿದರು. ಬ್ಯಾಂಕಿನ ವತಿಯಿಂದ ವಕೀಲರ ಸಂಘಕ್ಕೆ ವಿದ್ಯುಚ್ಛಕ್ತಿ ಬಿಲ್ಲನ್ನು ನೀಡುತ್ತಿಲ್ಲ, ತಾವುಗಳು ವಿದ್ಯುಚ್ಛಕ್ತಿ ಹಣವನ್ನು ನೀಡಿ ಜೊತೆಗೆ ಸೋಲಾರ್ ಅಳವಡಿಕೆಯ ನಂತರ ತಮಗೂ ಸೋಲಾರ್ ವ್ಯವಸ್ಥೆಯನ್ನು ನೀಡಲಾಗುವುದು ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

2. **ಶ್ರೀ ಹಾಲೇಶ್** ರವರು ಮಾತನಾಡುತ್ತಾ ಬ್ಯಾಂಕಿನ ನಿರ್ದೇಶಕರುಗಳಿಗೆ ವಂದಿಸುತ್ತಾ ಬ್ಯಾಂಕಿನಲ್ಲಿ ಸದಸ್ಯರಲ್ಲದವರಿಂದ ಠೇವಣಿ ಸಂಗ್ರಹಿಸುವುದು ಸರಿಯಲ್ಲ ಹಾಗೂ ಸದಸ್ಯರಿಗೆ ಸಾಲ ನೀಡುವಾಗ ಶೇ.70ರ ಮಿತಿ ಮೀರಬಾರದು ಆದರೆ ತಾವು ಅದರ ಮಿತಿಯನ್ನು ಮೀರಿದ್ದೀರಿ ಇದು ಆರ್.ಬಿ.ಐನ ನಿಯಾಮಾವಳಿಗೆ ವಿರುದ್ದವಾಗಿದ್ದು ಇದನ್ನು ತಾವುಗಳು ಕೂಡಲೇ ಸರಿಪಡಿಸಿಕೊಳ್ಳಬೇಕು , ಸಾಲಗಳಿಗೆ ಇನ್ಸೂರೆನ್ಸ್ ಮಾಡಿಸಿ, ಬ್ಯಾಂಕಿನ ವತಿಯಿಂದ ಒಂದೇ ಬ್ಯಾಂಕಿನಲ್ಲಿ ಠೇವಣಿಯನ್ನು ಹೂಡಿಕೆಮಾಡಬೇಡಿ ಎಂದು ತಿಳಿಸಿದರು.

3. **ಶ್ರೀ ಶಿವಮೂರ್ತಿ** ರವರು ಮಾತನಾಡುತ್ತಾ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರನ್ನು ಸ್ಮರಿಸುತ್ತಾ ಕೋವಿಡ್ ಸಂದರ್ಬದಲ್ಲಿ 3.32ಕೋಟಿಯಷ್ಟು ಲಾಭ ಗಳಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ವಕೀಲರ ಸಂಘಕ್ಕೆ ವಿದ್ಯುಚ್ಛಕ್ತಿ ಮೊತ್ತವನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು.

4. **ಶ್ರೀ ಕುಮಾರ್.ಆರ್.ಎಸ್.ಗೌಡ** ರವರು ಮಾತನಾಡುತ್ತಾ ಬ್ಯಾಂಕಿನ ಆದಾಯ ಗಳಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಹಾಸಭೆಯ ಬಗ್ಗೆ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡಬಹುದಿತ್ತು. 2019-2020ರ ವರ್ಷದ ಡಿವಿಡೆಂಡ್ ವಿತರಿಸಲು ಮನವಿ ಮಾಡಿದರು. ಸಿಬ್ಬಂದಿ ಬೋನಸ್ಸು ಪಾವತಿಸುವಂತೆ ತಿಳಿಸಿದರು. ಈಶ್ವರಚಾರಿ ಸಾಲದ ಬಗ್ಗೆ ಮಾಹಿತಿಯನ್ನು ಕೇಳಿದರು. ಆಡಿಟ್ ವರದಿಯಲ್ಲಿ ಸೂಚಿಸಿರುವಂತಹ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಿ ಎಂದು ತಮ್ಮ ಸಲಹೆಯನ್ನು ನೀಡಿದರು.

5. **ಶ್ರೀ ಸತ್ಯನಾರಾಯಣ** ರವರು ಮಾತನಾಡುತ್ತಾ ಸಂದಾಯವಾದ ಷೇರು ಬಂಡವಾಳದ ಬಗ್ಗೆ ಯಾವ ರೀತಿ ಬಂಡವಾಳವನ್ನು ಹೂಡಿಕೆ ಮಾಡಿದ್ದಿರಿ. ಇತರೆ ಜವಾಬ್ದಾರಿಯಲ್ಲಿ ಇರುವ ಷೇರು ಅಮಾನತ್ತನ್ನು ಚುಕ್ತಮಾಡಿ, ನಿರ್ದೇಶಕರು ಸಭೆಗೆ ಹಾಜರಿಲ್ಲದಿರುವುದರ ಬಗ್ಗೆ ಮಾತನಾಡುತ್ತಾ ನಿರ್ದೇಶಕರುಗಳು ಎಲ್ಲಾ ಸಭೆಗಳಿಗೂ ಹಾಜರಾಗಿ, ಖರ್ಚು ವೆಚ್ಚಗಳನ್ನು ಆದಷ್ಟು ಕಡಿಮೆ ಮಾಡಿ ಹಾಗೂ ಪ್ರಸಕ್ತ ಸಾಲಿನಲ್ಲಿ ಲಾಭ ಗಳಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

6 **ಶ್ರೀ. ಪುಟ್ಟರಾಜು** ರವರು ಮಾತನಾಡುತ್ತಾ ಬ್ಯಾಂಕಿನ ವತಿಯಿಂದ ಸದಸ್ಯರ ಮಕ್ಕಳಿಗೆ ವಿದ್ಯಾಭ್ಯಾಸ ಸಾಲ ನೀಡಿ, ಸದಸ್ಯರಿಗೆ ಬಂಗಾರದ ಸಾಲ ನೀಡಿ, ಸಾದ್ಯವಾದಲ್ಲಿ ಸಾಲದ ಬಡ್ಡಿದರಗಳನ್ನು ಕಡಿಮೆ ಮಾಡಿ, ವೈಯಕ್ತಿಕ ಸಾಲದ ಮಿತಿಯನ್ನು ರೂ 1 ಲಕ್ಷಕ್ಕೆ ಹೆಚ್ಚಿಸಿ ಇದರಿಂದ ವಕೀಲರಿಗೆ ಅನುಕೂಲವಾಗುತ್ತದೆ ಎಂಬ ಸಲಹೆಗಳನ್ನು ನೀಡಿದರು.

7. **ಶ್ರೀ. ರವಿ.ಟಿ.ಜಿ** ರವರು ಮಾತನಾಡುತ್ತಾ ಕೊರೋನಾ ಸಂದರ್ಭದಲ್ಲಿ ಬ್ಯಾಂಕಿನ ವತಿಯಿಂದ ನೀಡಿದ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವಕೀಲರ/ಸದಸ್ಯರು ಮಕ್ಕಳಿಗೆ ಲ್ಯಾಪ್‌ಟ್ಯಾಪ್ ಸೌಲಭ್ಯವನ್ನು ಕಲ್ಪಿಸಲು ಸಾಲವನ್ನು ನೀಡಿ ಎಂದು ಮನವಿ ಮಾಡಿದರು, ಗೃಹ ಸಾಲವನ್ನು ದೊಡ್ಡ ಮೊತ್ತದಲ್ಲಿ ನೀಡಿ ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

8. **ಶ್ರೀ.ವೆಂಕಟಮುನಿಶೆಟ್ಟಿ.ಕೆ** ರವರು ಮಾತನಾಡುತ್ತಾ ಈ ಬಾರಿ 3.32ಕೋಟಿ ಲಾಭ ಗಳಿಸಿದ್ದು, ಶೇ.15 ಲಾಭಾಂಶ ಘೋಷಣೆ ಮಾಡಿದ್ದೀರಿ ಅದನ್ನು ಇನ್ನೂ ಹೆಚ್ಚಿಸಿ, ಸಿಬ್ಬಂದಿಗಳಿಗೆ ವೇತನ ಹೆಚ್ಚಿಸಿ, ಸದಸ್ಯರ ಮರಣ ಪರಿಹಾರವನ್ನು ಹೆಚ್ಚಿಸಿ, ಕೋವಿಡ್ ಸಾಲ ಶೇ.1 ರಂತೆ ನೀಡಿದ್ದು ಇದರಿಂದ ಬ್ಯಾಂಕಿಗೆ 12 ರಿಂದ 14 ಲಕ್ಷ ನಷ್ಟವಾಗಿದೆ, ವಕೀಲರಿಗೆ ಮಾತ್ರ ಸಾಲ ನೀಡಿ, ಬೇರೆಯವರಿಗೆ ಸಾಲ ನೀಡಬೇಡಿ, ಕಳೆದ ಸಾಲಿನ ಬಾಕಿ ಇರುವ ಸಿಬ್ಬಂದಿ ಬೋನಸ್ಸು ನೀಡಿ, ಕನಿಷ್ಟ ದಾಖಲೆಗಳನ್ನು ಪಡೆದು ಬ್ಯಾಂಕಿನಿಂದ ಸದಸ್ಯರಿಗೆ ಸಾಲ ನೀಡಿ, ವಕೀಲರ ಕಛೇರಿ ಪ್ರಾರಂಭಕ್ಕೆ 2 ರಿಂದ 3 ಲಕ್ಷದವರೆಗೆ ಸಾಲ ನೀಡಿ, ಹಲವಾರು ವರ್ಷಗಳಿಂದಲೂ ನಮ್ಮ ಬ್ಯಾಂಕಿನಲ್ಲಿ ಪ್ರಧಾನ ವ್ಯವಸ್ಥಾಪಕರು ಪ್ರಭಾರ

ವಾಗಿಯೇ ಮುಂದುವರಿಯುತ್ತಿದ್ದಾರೆ ಇದು ಸರಿಯಲ್ಲ ತಾವುಗಳು ಖಾಯಂ ಪ್ರಧಾನ ವ್ಯವಸ್ಥಾಪಕರ ನೇಮಕಾತಿಯನ್ನು ಮಾಡಿಕೊಳ್ಳಿ ಎಂಬ ಸಲಹೆಯನ್ನು ನೀಡಿದರು.

9. **ಶ್ರೀ.ಭಕ್ತವತ್ಸಲ ರವರು** ಮಾತನಾಡುತ್ತಾ ಬ್ಯಾಂಕು ಉತ್ತಮ ಸ್ಥಿತಿಯಲ್ಲಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು, ಷೇರು ಮೊತ್ತವನ್ನು ಕಡಿಮೆ ಮಾಡಿ, ಕಡಿಮೆ ಮಾಡುವುದರ ಬಗ್ಗೆ ವಾರ್ಷಿಕ ಮಹಾಸಭೆಯಲ್ಲಿಯೇ ತೀರ್ಮಾನ ಕೈಗೊಳ್ಳಿ, ಬ್ಯಾಂಕಿನ ಶಾಖೆಯನ್ನು ಮೇಯೋಹಾಲ್‌ನಲ್ಲಿ ತೆರೆಯಿರಿ, ಸಾಲದ ವಿತರಣೆಯಲ್ಲಿ ಸದಸ್ಯರಿಗೆ ಆರೋಗ್ಯ ವಿಮೆ ಮಾಡಿಸಿ, ಬ್ಯಾಂಕಿನ ವತಿಯಿಂದ ಹಾಗೂ ಇತರ ಸಂಘ ಸಂಸ್ಥೆಗಳ ಸಹಾಯದಿಂದ ಬ್ಯಾಂಕಿನ ಸದಸ್ಯರಿಗೆ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿ, ಕಿರಿಯ ವಕೀಲರ ಸಹಾಯ ಮಾಡಿ ಎಂಬ ಸಲಹೆಯನ್ನು ನೀಡಿದರು.

10. **ಶ್ರೀ.ಪಾಪೇಗೌಡ ರವರು** ಮಾತನಾಡುತ್ತಾ ಬೆಂಗಳೂರಿನಲ್ಲಿ ವಕೀಲ ವೃತ್ತಿ ನಡೆಸುತ್ತಿರುವ ಕಿರಿಯ ಹಾಗೂ ಇತರ ವಕೀಲರಿಗೆ ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಶಾಶ್ವತ ಸೇವೆ ಕಲ್ಪಿಸಲು ಬ್ಯಾಂಕಿನ ವತಿಯಿಂದ ಕ್ರಮ ಕೈಗೊಳ್ಳಿ, ಸಾಹಿತ್ಯ ಕೂಟಕ್ಕೆ ಅನುದಾನ ನೀಡಲು ಮನವಿ, ಸದಸ್ಯತ್ವ ಪಡೆಯಲು ಅಭಿಯಾನ ಮಾಡಿ, ಬೆಂಗಳೂರಿನ ವಿಳಾಸವಿಲ್ಲದಿದ್ದರೂ ಕೂಡ ವಕೀಲರ ಸಂಘದ ಗುರುತಿನ ಚೀಟಿ ಪಡೆದು ಸದಸ್ಯತ್ವ ನೀಡಿ ಎಂದು ಸಲಹೆಯನ್ನು ನೀಡಿದರು.

11. **ಶ್ರೀ.ಕೇಶವ.ಕೆ.ವಿ ರವರು** ಮಾತನಾಡುತ್ತಾ ಸದಸ್ಯರು ಇಲ್ಲಿಯವರೆಗೆ ಮಾತನಾಡಿರುವುದು ಅವರ ಅಭಿಪ್ರಾಯವನ್ನು ಸೂಚಿಸಿರುತ್ತಾರೆ. ಆದರೆ ಆಡಳಿತ ಮಂಡಳಿಯು ಆರ್.ಬಿ.ಐ ನೀಡುವ ಸೂಚನೆ ಮತ್ತು ಮಾರ್ಗದರ್ಶನಗಳ ಒಳಗೆ ಕಾರ್ಯನಿರ್ವಹಿಸಬೇಕಾಗಿರುತ್ತದೆ. ವೈಯಕ್ತಿಕ ಸಾಲದ ಮಿತಿಯನ್ನು ಹೆಚ್ಚಿಸಲು ಆರ್.ಬಿ.ಐ ಮಾನದಂಡವಿರುತ್ತದೆ ಅದನ್ನು ಬಿಟ್ಟು ಆಡಳಿತ ಮಂಡಳಿಯು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಮಕ್ಕಳಿಗೆ ನೀಡುವ ಪ್ರತಿಭಾ ಪುರಸ್ಕಾರಕ್ಕೆ ಸಮಯವನ್ನು ನಿಗದಿಮಾಡಿ, ಲೆಕ್ಕಪರಿಶೋಧಕರು ಸೂಚಿಸಿರುವ ನ್ಯೂನ್ಯತೆಗಳಿಗೆ ಬ್ಯಾಂಕಿನಿಂದ ತಯಾರಿಸಿರುವ ಸಮಾಧಾನಗಳನ್ನು ಆದಷ್ಟು ಕಾರ್ಯಗತ ಮಾಡಿ, ಎಲಕ್ಟ್ರಿಕಲ್ ವಾಹನಗಳಿಗೆ ಸಾಲ ನೀಡಿ ಎಂದು ತಮ್ಮ ಸಲಹೆಯನ್ನು ನೀಡಿದರು.

12. **ಶ್ರೀ.ಪರಮೇಶ್ವರ.ಹೆಚ್.ಎಸ್.ರವರು** ಮಾತನಾಡುತ್ತಾ ಸುಸ್ತಿಯಾದ ಸಾಲಗಾರರ ಬಗ್ಗೆ ಎಚ್ಚರವಹಿಸಿ, ಸಾಲ ಪಡೆದವರು ಸಾಲ ಮರುಪಾವತಿಯಲ್ಲಿ ಶಿಸ್ತು ವಹಿಸಬೇಕು, ಪಿಗ್ಮಿ ಯೋಜನೆಯನ್ನು ಇತಿಮಿತಿಯಲ್ಲಿಡಲು ಮನವಿ, ಪಿಗ್ಮಿ ಠೇವಣಿ ಆದಾರದ ಮೇಲೆ ಸಾಲಗಳನ್ನು ನೀಡಿ, ಕ್ಲಾಸ್ 1 ಕಂಟ್ರಾಕ್ಟರ್‌ಗಳಿಗೆ ಸಾಲ ನೀಡಿ, ವಕೀಲರ ಸಮುದಾಯಕ್ಕೆ ಒಂದು ಸಮುದಾಯ ಭವನವನ್ನು ನಿರ್ಮಿಸಿ ಎಂದು ತಮ್ಮ ಸಲಹೆಯನ್ನು ನೀಡಿದರು.

13. **ಶ್ರೀ.ಚಿಕ್ಕವೆಂಕಟಯ್ಯ ರವರು** ಮಾತನಾಡುತ್ತಾ ಬ್ಯಾಂಕಿನ ವತಿಯಿಂದ ಸದಸ್ಯರಿಗೆ ನೀಡುತ್ತಿರುವ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪದಾದಿಕಾರಿಗಳು ಮನಸ್ಸು ಮಾಡಿದರೆ ಗ್ರೂಪ್ ಇನ್ಸುರೆನ್ಸ್ ಮಾಡಬಹುದು, ಇದರಿಂದ ತೆರಿಗೆ ವಿನಾಯಿತಿ ದೊರೆಯುತ್ತದೆ. ಸಾಲ ಪಡೆದು ನಿಧನರಾದ ಹಾಗೂ ತೀರಾ ಆರ್ಥಿಕವಾಗಿ ಹೊಡೆತ ಅನುಭವಿಸಿದ ಸದಸ್ಯರಿಗೆ ಆಡಳಿತ ಮಂಡಳಿಯವರು ಕೆಲವು ವಿನಾಯಿತಿಗಳನ್ನು ನೀಡಬೇಕು ಎಂದು ತಿಳಿಸಿದರು.

14. **ಶ್ರೀ.ವಿವೇಕ್ ಸುಬ್ಬಾರೆಡ್ಡಿ ರವರು** ಮಾತನಾಡುತ್ತಾ ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರುಗಳನ್ನು ಸ್ಮರಿಸುತ್ತಾ ವಕೀಲರುಗಳ ಕಷ್ಟಗಳ ಬಗ್ಗೆ ಅರಿವಿದ್ದು ಈ ಬ್ಯಾಂಕನ್ನು ಪ್ರಾರಂಭ ಮಾಡಿದ್ದಾರೆ. ಯಾವ ಸಂಘ ಸಂಸ್ಥೆಗಳು ವಕೀಲರಿಗೆ ಸಿ.ಎಸ್.ಆರ್ ಫಂಡ್ ನೀಡುತ್ತಿಲ್ಲ, ಈ ಫಂಡನ್ನು ನೀಡಲು ಬ್ಯಾಂಕು ನಿರ್ಧರಿಸಿ ವಕೀಲರಿಗೆ ಸಹಾಯ ಹಸ್ತ ನೀಡಬೇಕು. ಈ ನಿಧಿಯು ಯುವ ವಕೀಲರಿಗೆ ಸ್ಟೈಫಂಡ್ ನೀಡಲು ಸಹಾಯವಾಗುತ್ತದೆ. ಈ ನಿಧಿಯನ್ನು ಉಪಯೋಗ ಮಾಡಲು ನಿವೃತ್ತ ನ್ಯಾಯಾಧೀಶರ ಮಾರ್ಗದರ್ಶನ ಪಡೆದು ಈ ನಿಧಿಯನ್ನು ಕಲ್ಪಿಸಿ ಇದರಿಂದ ಯುವ ಹಾಗೂ ಹಿರಿಯ ವಕೀಲರಿಗೆ ಅನುಕೂಲವಾಗುತ್ತದೆ ಎಂದು ತಮ್ಮ ಸಲಹೆಯನ್ನು ನೀಡಿದರು.

15. **ಶ್ರೀ.ಜಗದೀಶ್ ರವರು** ಮಾತನಾಡುತ್ತಾ ಆದಾಯತೆರಿಗೆ ರಿಟರ್ನ್‌ಗಳನ್ನು ಸಡಿಲಗೊಳಿಸಿ ಸದಸ್ಯರಿಗೆ ಸಾಲ ನೀಡಿ, ಎಲ್ಲಾ ಜಿಲ್ಲೆಗಳಲ್ಲಿಯೂ ಶಾಖೆಗಳನ್ನು ತೆರೆದು ವಕೀಲರಿಗೆ ಸಹಾಯ ಮಾಡಿ ಎಂದು ಸಲಹೆಯನ್ನು ನೀಡಿದರು.

16. **ಶ್ರೀ.ಜಗದೀಶ್.ಎಲ್ ರವರು** ಮಾತನಾಡುತ್ತಾ ನಮ್ಮ ಬ್ಯಾಂಕಿನಲ್ಲಿ ಆರ್.ಟಿ.ಜಿ.ಎಸ್ ಮತ್ತು ನೆಪ್ಟ್ ಮಾಡಿದರೆ ಯಾವುದೇ ವೆಚ್ಚ ಇರುವುದಿಲ್ಲ. ಡಿಡಿ ಸೇವೆಯು ಶೀಘ್ರವಾಗಿ ದೊರೆಯುತ್ತದೆ, ಬ್ಯಾಂಕಿನ ಉಳಿವಿಗೆ ಉತ್ತಮ ನಿರ್ದೇಶಕರುಗಳು ಮತ್ತೇ ಮತ್ತೇ ಬ್ಯಾಂಕಿಗೆ ಚುನಾಯಿತರಾಗಿ ಬರಲಿ, ಬ್ಯಾಂಕಿನಲ್ಲಿ ಸದಸ್ಯತ್ವವನ್ನು ಪಡೆಯುವಾಗ ಸದಸ್ಯತ್ವ ಪಡೆಯಲು ಬಂದ ವಕೀಲರಿಗೆ ತಾವು ಸಾಹಿತ್ಯ ಕೂಟದಲ್ಲಿಯೂ ಸದಸ್ಯತ್ವ ಪಡೆಯಿರಿ ಎಂದು ಸೂಚಿಸಿ ಎಂದು ತಿಳಿಸಿದರು.

17. **ಶ್ರೀ.ಪ್ರಶಾಂತ್ ರವರು** ಮಾತನಾಡುತ್ತಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಬದಲಾಗಿ ಟ್ಯಾಬ್ ನೀಡಿ ಹಾಗೂ ಡಿವಿಡೆಂಡ್ ಮೊತ್ತವನ್ನು ಸಭೆಯ ಅನುಮತಿಯೊಂದಿಗೆ ಗ್ರೂಪ್ ಇನ್ಸುರೆನ್ಸ್ ಸ್ಕೀಮ್ ನೀಡಿ ಎಂದು ತಮ್ಮ ಸಲಹೆಯನ್ನು ನೀಡಿದರು.

18. **ಶ್ರೀ.ರಾಜಣ್ಣರವರು** ಮಾತನಾಡುತ್ತಾ ಸಹಕಾರ ಕಲ್ಪನೆ ರಾಷ್ಟ್ರೀಕೃತ ಬ್ಯಾಂಕಿನ ಬಿಗಿ ಕೆಲಸದಿಂದ ಹುಟ್ಟಿಕೊಂಡಿವೆ. ಸಾಲ ಸೌಲಭ್ಯ ಒದಗಿಸಲು ಕೆಲವು ನಿಯಾಮಾವಳಿಗಳನ್ನು ಮಿತಿಗೊಳಿಸಿ ಸರಳಗೊಳಿಸುವಂತೆ ಮನವಿ ಮಾಡಿ ಇದರಿಂದ ಬ್ಯಾಂಕಿನ ಸ್ಥಾಪನೆ ಹಾಗೂ ಇದರ ಉದ್ದೇಶ ಕಾರ್ಯಗತಗೊಳ್ಳುತ್ತದೆ ಎಂದು ತಿಳಿಸಿದರು.

19. **ಶ್ರೀ.ಸುರೇಶ್ ರವರು** ಮಾತನಾಡುತ್ತಾ ಮ್ಯಾಜಿಸ್ಟ್ರೇಟ್ ಕೋರ್ಟಿನ ಶಾಖೆಯನ್ನು ಬೇರೆ ವಿಶಾಲವಾದ ಜಾಗಕ್ಕೆ ವರ್ಗಾವಣೆ ಮಾಡಿ ಇದರಿಂದ ಹೆಚ್ಚು ವ್ಯವಹಾರವಾಗುತ್ತದೆ ಎಂದು ತಿಳಿಸಿದರು.

ನಂತರ ಬ್ಯಾಂಕಿನ ನಿರ್ದೇಶಕರಾದ ಶ್ರೀ.ಪ್ರಕಾಶ್.ಜೆ.ವಿ ರವರು ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳಿಗೆ ಧನ್ಯವಾದ ತಿಳಿಸಿದರು ಹಾಗೂ ಉತ್ತಮ ಸಲಹೆ ಮತ್ತು ಸೂಚನೆಗಳನ್ನು ನೀಡಿದ ಸದಸ್ಯರುಗಳ ಪ್ರಶ್ನೆಗಳಿಗೆ ಅಧ್ಯಕ್ಷರಾದ ಶ್ರೀ.ಸೊಣ್ಣೇಗೌಡ.ಎನ್.ಎಂರವರು ಉತ್ತರ ನೀಡಿದರು.

1. **ಶ್ರೀ.ರಂಗನಾಥ್.ಎ.ಪಿ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ತಮ್ಮ ಸಂಸ್ಥೆಗೆ ವಿದ್ಯುಚ್ಛಕ್ತಿ ಮೊತ್ತವನ್ನು ಪಾವತಿಸುವ ಬಗ್ಗೆ ಶ್ರೀಘ್ರದಲ್ಲೇ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

2. **ಶ್ರೀ.ಹಾಲೇಶ್** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಆರ್.ಬಿ.ಐನ ನಿಯಾಮಾನುಸಾರ ಸದಸ್ಯರಿಂದ ಹಾಗೂ ಸದಸ್ಯರಲ್ಲದವರಿಂದ ಠೇವಣಿಯನ್ನು ಸಂಗ್ರಹಿಸಲೆಬೇಕು. ಸದಸ್ಯರಲ್ಲದವರಿಂದ ಠೇವಣಿಯನ್ನು ಸಂಗ್ರಹಿಸದೆ ಹೋದಲ್ಲಿ ಬ್ಯಾಂಕನ್ನು ನಡೆಸುವುದು ಕಷ್ಟ ಹಾಗೂ ಸಿ.ಡಿ.ರೇಷಿಯೋ ಈಗಾಗಲೇ ನಿಗದಿತ ಮಿತಿಯೊಳಗೆ ಬಂದಿರುತ್ತದೆ. ಸಾಲಗಳಿಗೆ ವಿಮೆ ಮಾಡಿಸುವುದರ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು, ನಾವು ಅಪೆಕ್ಸ್ ಬ್ಯಾಂಕಿನಲ್ಲಿಯೇ ಹೂಡಿಕೆ ಮಾಡಿದ್ದು ಬೇರೆ ಬ್ಯಾಂಕುಗಳಿಗೆ ಹೋಲಿಕೆ ಮಾಡಿದಲ್ಲಿ ಠೇವಣಿಗಳ ಮೇಲೆ ನೀಡುವ ಬಡ್ಡಿಯ ದರವು ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.

3. **ಶ್ರೀ.ಶಿವಮೂರ್ತಿ**, ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ವಿದ್ಯುಚ್ಛಕ್ತಿ ಹಣವನ್ನು ಶ್ರೀಘ್ರದಲ್ಲೇ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

4. **ಶ್ರೀ.ಕುಮಾರ್.ಆರ್.ಎಸ್.ಗೌಡ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಮುಂದಿನ ದಿನಗಳಲ್ಲಿ ಎಸ್.ಎಂ.ಎಸ್ ಮುಖಾಂತರವು ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಬಗ್ಗೆ ತಿಳುವಳಿಕೆ ನೀಡಲಾಗುವುದು, 2019-2020ನೇ ಸಾಲಿನ ಡಿವಿಡೆಂಡ್ ಕೊಡಲು ಮಂಡಳಿಯು ನಿರ್ದರಿಸಿದ್ದು ಆದರೆ ಆರ್.ಬಿ.ಐ ಈ ಸಾಲಿನ ಡಿವಿಡೆಂಡ್ ಮೊತ್ತವನ್ನು ಹಂಚಿಕೆ ಮಾಡಬಾರದೆಂಬ ಸೂಚನೆಯಿರುವುದರಿಂದ ಹಂಚಿಕೆ ಮಾಡಿರುವುದಿಲ್ಲ. ಈಶ್ವರಚಾರಿಯ ಸಾಲದ ಬಗ್ಗೆ ಉತ್ತರಿಸುತ್ತಾ ಈಗಾಗಲೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾವಾ ಹೂಡಿದ್ದು, ಶೀಘ್ರದಲ್ಲಿಯೇ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಹಾಗೂ ಆಡಿಟ್ ವರದಿಯಲ್ಲಿ ಸೂಚಿಸಿರುವ ನ್ಯೂನ್ಯತೆಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಲಾಗುವುದು ಎಂದು ತಿಳಿಸಿದರು.

5. **ಶ್ರೀ.ಸತ್ಯನಾರಾಯಣ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸದಸ್ಯರು ಮರಣ ಹೊಂದಿದ್ದು ಅವರ ಷೇರು ಹಣವನ್ನು ಅಮಾನತ್ತು ಖಾತೆಯಲ್ಲಿರಿಸಿದ್ದು ಇದನ್ನು ಆದಷ್ಟು ಶ್ರೀಘ್ರವಾಗಿ ಚುಕ್ತ ಮಾಡಲಾಗುವುದು. ಆಡಳಿತ ಮಂಡಳಿಯು ಬ್ಯಾಂಕಿನಲ್ಲಿ ಆದಷ್ಟು ಕಡಿಮೆ ಖರ್ಚು ವೆಚ್ಚಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

6. **ಶ್ರೀ.ಪುಟ್ಟರಾಜು** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಬಂಗಾರದ ಸಾಲವು ನಮ್ಮ ಬ್ಯಾಂಕಿನಲ್ಲಿ ಬೇಡಿಕೆ ಇರುವುದಿಲ್ಲ. ವಿದ್ಯಾಭ್ಯಾಸದ ಸಾಲವನ್ನು ನೀಡಲು ಸಾಧ್ಯವಿಲ್ಲ ನಮಗೆ ಠೇವಣಿದಾರರು ಠೇವಣಿ ಮಾಡಿರುವುದರ ಆದಾರದ ಮೇಲೆ ಸಾಲವನ್ನು ನೀಡಲಾಗುತ್ತಿದೆ ನಮಗೆ ಯಾವುದೇ ಸರ್ಕಾರದಿಂದಲೂ ದೇಣಿಗೆಗಳು ಅಥವಾ ಬಡ್ಡಿ ಮನ್ನಾ ಮಾಡಲು ಹಣವು ಬರುವುದಿಲ್ಲ, ಈಗಾಗಲೇ ಬಡ್ಡಿಯ ದರಗಳು ಸಮಪ್ರಮಾಣದಲ್ಲಿರುತ್ತವೆ, ಜಾಮೀನುದಾರರ ಸಾಲದ ಹಣವನ್ನು ಹೆಚ್ಚಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.

7. **ಶ್ರೀ.ರವಿ.ಟಿ.ಜಿ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಗೃಹ ಸಾಲದ ಮಿತಿಯು ಆರ್.ಬಿ.ಐ ನಿಗದಿಪಡಿಸಿರುವ ಮಿತಿಯೊಳಗೆ ನೀಡಲಾಗುತ್ತಿದೆ ಅದನ್ನು ಆರ್.ಬಿ.ಐ ಹೆಚ್ಚಿಸಿದಲ್ಲಿ ಮಾತ್ರ ಹೆಚ್ಚಿಸಬಹುದಾಗಿರುತ್ತದೆ ಎಂದು ತಿಳಿಸಿದರು.

8. **ಶ್ರೀ.ವೆಂಕಟಮುನಿಶೆಟ್ಟಿ.ಕೆ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಈಗಾಗಲೇ ಸದಸ್ಯರ ಮರಣೋತ್ತರ ಪರಿಹಾರ ನಿಧಿಯು ರೂ.10000/- ನೀಡುತ್ತಿದ್ದು ಇದರ ಬಗ್ಗೆ ಮುಂದಿನ ದಿನಗಳಲ್ಲಿ ಹೆಚ್ಚಿಸಲು ಪ್ರಯತ್ನಿಸಲಾಗುವುದು, ಕೋವಿಡ್ ಸಾಲ ನೀಡಿಕೆಯಲ್ಲಿ ಆದಷ್ಟು ಜಾಗ್ರತೆವಹಿಸಿ ಸಾಲ ನೀಡಲಾಗಿದೆ. ಕಳೆದ ಸಾಲಿನ ಸಿಬ್ಬಂದಿ ಬೋನಸ್ಸನ್ನು ಸದಸ್ಯರಿಗೆ ಡಿವಿಡೆಂಡ್ ನೀಡದೇ ಇರುವ ಕಾರಣ ನೀಡಿರುವುದಿಲ್ಲ ಇದರ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ತಿರ್ಮಾನ ಕೈಗೊಳ್ಳಲಾಗುವುದು. ಪ್ರಧಾನ ವ್ಯವಸ್ಥಾಪಕರ ಹುದ್ದೆಯ ನೇಮಕಾತಿಯ ಬಗ್ಗೆ ಮಂಡಳಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

9. **ಶ್ರೀ.ಭಕ್ತವತ್ಸಲ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ 2018-2019ರ ವಾರ್ಷಿಕ ಮಹಾಸಭೆಯಲ್ಲಿ ಇದರ ಬಗ್ಗೆ ತೀರ್ಮಾನಿಸಿದ್ದು ಅದರಂತೆ ಷೇರು ಮೊತ್ತವನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಏನಾದರೂ ಸಾಲದ ಅವಶ್ಯಕತೆ ಇದ್ದಲ್ಲಿ ಸಹಸದಸ್ಯತ್ವವನ್ನು ನೀಡಿ ಸಾಲ ನೀಡಲಾಗುವುದು ಎಂದು ತಿಳಿಸಿದರು. ಆರೋಗ್ಯ ವಿಮೆ ಮಾಡಿಸುವುದರ ಬಗ್ಗೆ ಸೂಕ್ತ ನಿರ್ದಾರಗಳನ್ನು ಕೈಗೊಳ್ಳಲಾಗುವುದು, ಕಾಯಿದೆಯನ್ವಯ ಬ್ಯಾಂಕಿನ ವತಿಯಿಂದ ಆಂಬ್ಯುಲೆನ್ಸ್ ಸೌಕರ್ಯ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು.

10. **ಶ್ರೀ.ಪಾಪೇಗೌಡ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ವಕೀಲರ ಸಾಹಿತ್ಯ ಕೂಟಕ್ಕೆ ಅನುದಾನ ನೀಡಲು ಸಾಧ್ಯವಿಲ್ಲ, ಆರ್.ಬಿ.ಐನ ನಿಯಾಮಾನುಸಾರ ಕೆವೈಸಿ ನಿಯಾಮಾನುಸಾರವೇ ನಾವು ಸದಸ್ಯತ್ವ ನೀಡಬೇಕು ಎಂದು ತಿಳಿಸಿದರು.

11. **ಶ್ರೀ.ಕೇಶವ.ಕೆ.ವಿ** ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡುವ ಸಮಯವನ್ನು ಮುಂದಿನ ದಿನಗಳಲ್ಲಿ ನಿಗದಿ ಮಾಡಲಾಗುವುದು, ಲೆಕ್ಕಪರಿಶೋಧಕರ ಸಲಹೆ ಮತ್ತು ಸೂಚನೆಗಳನ್ನು ಆದಷ್ಟು ಕಾರ್ಯಗತಗೊಳಿಸಲಾಗುವುದು. ಎಲೆಕ್ಟ್ರಿಕಲ್ ವಾಹನಗಳಿಗೆ ಸಾಲ ನೀಡುವುದರ ಬಗ್ಗೆ ಸೂಕ್ತ ನಿರ್ದಾರವನ್ನು ಕೈಗೊಳ್ಳಲಾಗುವುದು.

12. **ಶ್ರೀ.ಪರಮೇಶ್ವರ.ಹೆಚ್.ಎಸ್**.ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಈಗಾಗಲೇ ಪಿಗ್ಮಿ ಠೇವಣಿಗಳ ಆದಾರದ ಮೇಲೆ ಪಿಗ್ಮಿ ಠೇವಣಿ ಸಾಲ ನೀಡಲಾಗುತ್ತಿದೆ. ಬ್ಯಾಂಕಿನ ವತಿಯಿಂದ ಸಮುದಾಯ ಭವನವನ್ನು ನಿರ್ಮಿಸಲು ಕಾಯಿದೆಯಲ್ಲಿ ಅನುಮತಿಯಿರುವುದಿಲ್ಲ. ಸಾಲವಸೂಲಾತಿಯಲ್ಲಿ ಹೆಚ್ಚಿನ ಗಮನ ವಹಿಸಲಾಗುತ್ತಿದೆ ಎಂದು ತಿಳಿಸಿದರು.

13. **ಶ್ರೀ.ಚಿಕ್ಕವೆಂಕಟಯ್ಯ** ರವರ ಪ್ರಶ್ನೆಗಳಗೆ ಉತ್ತರಿಸುತ್ತಾ ಆರ್.ಬಿ.ಐ ನಿಯಾಮಾನುಸಾರವೇ ಸದಸ್ಯರಿಗೆ ಸಾಲ ನೀಡಲಾಗುತ್ತಿದೆ ಇದರಲ್ಲಿ ಯಾವುದೇ ಸಡಿಲಿಕೆಯಿರುವುದಿಲ್ಲವೆಂದು ತಿಳಿಸಿದರು.

14. **ಶ್ರೀ.ವಿವೇಕ್ ಸುಬ್ಬಾರೆಡ್ಡಿ** ರವರ ಪ್ರಶ್ನೆಗಳಗೆ ಉತ್ತರಿಸುತ್ತಾ ಸಿಎಸ್‌ಆರ್ ನಿಧಿಯ ಬಗ್ಗೆ ಆಡಳಿತ ಮಂಡಳಿಯ ಸೂಕ್ತ ನಿರ್ದಾರ ಕೈಗೊಳ್ಳಲಾಗುವುದು, ಕಾಯಿದೆಯಲ್ಲಿ ಬ್ಯಾಂಕಿನ ವತಿಯಿಂದ ಸ್ಟೈಫಂಡ್ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿದರು.

15. **ಶ್ರೀ.ಜಗದೀಶ್** ರವರ ಪ್ರಶ್ನೆಗಳಗೆ ಉತ್ತರಿಸುತ್ತಾ ಆದಾಯತೆರಿಗೆ ರಿಟರ್ನ್‌ಗಳ ಆಧಾರದ ಮೇಲೆ ಸಾಲ ನೀಡಿದ ಪಕ್ಷದಲ್ಲಿ ಕೇವಲ ಶೇ.20 ರಿಂದ 30 ರಷ್ಟು ಸದಸ್ಯರಿಗೆ ಸಾಲ ನೀಡಲು ಸಾಧ್ಯ, ನಾವುಗಳು ಅವರ ಇತರೆ ಆದಾಯಗಳನ್ನು ಸಹ ಪರಿಗಣಿಸಿ ಸಾಲ ನೀಡಲಾಗುತ್ತಿದೆ. ವಿವಿಧ ಜಿಲ್ಲೆಗಳಲ್ಲಿ ಶಾಖೆಗಳನ್ನು ಪ್ರಸಕ್ತವಾಗಿ ತೆರೆಯಲು ಸಾದ್ಯವಿಲ್ಲ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

16. **ಶ್ರೀ.ಜಗದೀಶ್.ಎಲ್** ರವರ ಪ್ರಶ್ನೆಗಳಗೆ ಉತ್ತರಿಸುತ್ತಾ ಬ್ಯಾಂಕಿನ ವತಿಯಿಂದ ಸಾಹಿತ್ಯ ಕೂಟದಲ್ಲಿ ಸದಸ್ಯತ್ವವನ್ನು ಪಡೆಯಿರಿ ಎಂದು ತಿಳಸಲು ಸಾದ್ಯವಿಲ್ಲ ಅದು ತಪ್ಪಾಗುತ್ತದೆ ಎಂದು ತಿಳಿಸಿದರು.

17. **ಶ್ರೀ.ಪ್ರಶಾಂತ್** ರವರ ಪ್ರಶ್ನೆಗಳಗೆ ಉತ್ತರಿಸುತ್ತಾ ಸಭೆಯಲ್ಲಿ ಭಾಗವಹಿಸಿದವರು ಮಾತ್ರ ಗ್ರೂಪ್ ಇನ್ಸೂರೆನ್ಸ್ ಮಾಡಿಸಲು ಡಿವಿಡೆಂಡ್ ಮೊತ್ತವನ್ನು ಬಳಸಿ ಎಂದು ಒಪ್ಪಿಗೆ ಸೂಚಿಸಬಹುದು ಬಾಕಿ ಇನ್ನುಳಿದ ಸದಸ್ಯರು ಇದಕ್ಕೆ ಸಮ್ಮತಿಯನ್ನು ನೀಡುವುದಿಲ್ಲ ಎಂದು ತಿಳಿಸಿದರು.

18. **ಶ್ರೀ.ಸುರೇಶ್**.ರವರ ಪ್ರಶ್ನೆಗಳಗೆ ಉತ್ತರಿಸುತ್ತಾ ಶಾಖೆಯನ್ನು ವ್ಯವಹಾರ ನಡೆಯುವ ಸ್ಥಳಕ್ಕೆ ವರ್ಗಾಯಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ನಂತರ ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದ ಶ್ರೀ.ಪ್ರಕಾಶ್.ಜೆ.ವಿ ರವರು ವಿಷಯ 8 ಅನುಮೋದನೆಗೆ ಸಭೆಯನ್ನು ಕೋರಿದರು. ಜೊತೆಗೆ ಬ್ಯಾಂಕಿನ ವತಿಯಿಂದ ತಯಾರಿಸಿರುವ ಸಮಾದಾನಗಳನ್ನು ಅನುಮೋದನೆಗೆ ಸಭೆಯನ್ನು ಕೋರಿದರು. ಸದಸ್ಯರಾದ ಶ್ರೀ.ಪೃಥ್ವಿರಾಜ್.ಎನ್.ಎಂ ರವರು ವಿಷಯಗಳನ್ನು ಒಪ್ಪಬಹುದೆಂದು ಸೂಚಿಸಿದರು. ಶ್ರೀ.ಮಾದೇಶ ರವರು ಅನುಮೋದಿಸಿದರು. ನಂತರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ನಂತರ ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದ ಶ್ರೀ.ಪ್ರಕಾಶ್.ಜೆ.ವಿ ರವರು ವಿಷಯ 9 ಅನುಮೋದನೆಗೆ ಹಾಗೂ ಕಳೆದ ಸಾಲಿನಲ್ಲಿ ಮುಂಗಡ ಪತ್ರದಲ್ಲಿ ಅನುಮತಿ ಪಡೆದಿರುವುದಕ್ಕಿಂತ ಹೆಚ್ಚಿಗೆ ಖರ್ಚು ಆಗಿರುವುದರ ಬಗ್ಗೆ ಸಭೆಯನ್ನು ಕೋರಿದರು. ಸಭೆಯು ಈ ಕೆಳಕಂಡಂತೆ ವಾರ್ಷಿಕ ಮುಂಗಡ ಪತ್ರವನ್ನು ಸರ್ವಾನುಮತದಿಂದ ಅನುಮೋದಿಸಿತು.

**1. ಆದಾಯ** (ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿವರಗಳು | 2020-21ನೇ ಸಾಲಿಗೆ ಅಂದಾಜು ಮಾಡಿರುವ ಆದಾಯ | 2020-21 ನೇ ಸಾಲಿನಲ್ಲಿ ಬಂದ ಆದಾಯ | ಹೆಚ್ಚಿಗೆ/ ಕಡಿಮೆ | 2021-22ನೇ ಸಾಲಿಗೆ ಅಂದಾಜು ಮಾಡಿರುವ ಆದಾಯ |
|---|---|---|---|---|---|
| 1 | ಹೂಡಿಕೆಗಳಿಂದ ಬಂದ ಬಡ್ಡಿ | 170.00 | 233.58 | 63.58 | 200.00 |
| 2 | ಸಾಲಗಳಿಂದ ಬಂದ ಬಡ್ಡಿ | 1156.00 | 1113.87 | -42.13 | 1200.00 |
| 3 | ಇತರೆ | 30.00 | 53.41 | 23.41 | 45.00 |
| | **ಒಟ್ಟು ಆದಾಯ** | 1356.00 | 1329.90 | 44.86 | 1445.00 |

**2.ಖರ್ಚುಗಳು:**

| ಕ್ರ.ಸಂ | ವಿವರಗಳು | 2020-21ನೇ ಸಾಲಿಗೆ ಅಂದಾಜು ಮಾಡಿರುವ ವೆಚ್ಚ | 2020-21ನೇ ಸಾಲಿನಲ್ಲಿ ಮಾಡಿರುವ ವೆಚ್ಚ | ಹೆಚ್ಚಿಗೆ/ ಕಡಿಮೆ | 2021-22ನೇ ಸಾಲಿಗೆ ಅಂದಾಜು ಮಾಡಿರುವ ವೆಚ್ಚ |
|---|---|---|---|---|---|
| 1 | ಠೇವಣಿಗಳ ಮೇಲೆ ಬಡ್ಡಿ ಪಾವತಿ | 750.00 | 761.37 | 11.37 | 800.00 |
| 2 | ಸಿಬ್ಬಂದಿ ಸಂಬಳ ಇತ್ಯಾದಿ | 100.00 | 72.00 | -28.00 | 100.00 |
| 3 | ತೆರಿಗೆ ಮತ್ತು ವಿಮೆ | 35.00 | 16.12 | -18.88 | 20.00 |
| 4 | ಅಂಚೆ | 2.00 | 0.05 | -1.95 | 2.00 |
| 5 | ದೂರವಾಣಿ | 5.00 | 2.89 | -2.11 | 5.00 |
| 6 | ಲೆಕ್ಕಪರೀಶೋಧನಾ ಶುಲ್ಕ, ತೆರಿಗೆ, ಸಲಹೆ ಮತ್ತು ಆಂತರೀಕ ಲೆಕ್ಕ ಪರಿಶೋಧನಾ ಶುಲ್ಕ | 7.50 | 5.68 | -1.82 | 7.00 |
| 7 | ಸವಕಳಿ | 10.00 | 10.11 | 0.11 | 15.00 |
| 8 | ಪೀಠೋಪಕರಣಗಳ ದುರಸ್ತು | 2.00 | 0.46 | -1.54 | 2.00 |
| 9 | ಮುದ್ರಣ ಮತ್ತು ಲೇಖನಸಾಮಗ್ರಿಗಳು | 5.00 | 0.95 | -4.05 | 5.00 |
| 10 | ಜಾಹೀರಾತು | 2.00 | 0.19 | -1.81 | 2.00 |
| 11 | ವಾರ್ಷಿಕ ಮಹಾಸಭೆಯ ವೆಚ್ಚ | 8.00 | 1.98 | -6.02 | 8.00 |
| 12 | ಸಾಫ್ಟ್‌ವೇರ್ ಮತ್ತು ಇತರೆ ಯಂತ್ರೋಪಕರಣಗಳ ವಾರ್ಷಿಕ ನಿರ್ವಹಣಾ ವೆಚ್ಚ | 2.00 | 1.36 | -0.64 | 2.00 |
| 13 | ವಾಚನಾಲಯ | 1.00 | 0.01 | -0.99 | 1.00 |
| 14 | ಆಡಳಿತ ಮಂಡಳಿ ಸಭೆಗಳ ವೆಚ್ಚ | 8.00 | 0.73 | -7.27 | 4.00 |
| 15 | ಚಂದಾ ಮತ್ತು ವಂತಿಕೆ | 1.00 | 1.65 | 0.65 | 1.00 |
| 16 | ಸಿಬ್ಬಂದಿ ತರಬೇತಿ ವೆಚ್ಚ | 1.00 | 0.00 | -1.00 | 1.00 |
| 17 | ದಾವಾ ಮತ್ತು ಅಮಲ್ಜಾರಿ ಶುಲ್ಕ | 1.00 | 0.00 | -1.00 | 1.00 |
| 18 | ಪ್ರಯಾಣ ವೆಚ್ಚ | 1.00 | 0.54 | -0.46 | 1.00 |
| 19 | ಚುನಾವಣಾ ವೆಚ್ಚ | 10.00 | 0.20 | -9.80 | 5.00 |
| 20 | ಪಿಎಫ್ ಆಡಳಿತ ವೆಚ್ಚ | 2.00 | 0.79 | -1.21 | 2.00 |
| 21 | ಸಿಬ್ಬಂದಿ ಗ್ರಾಚ್ಯುಟಿ | 5.00 | 2.23 | -2.77 | 5.00 |
| 22 | ಇತರೆ | 5.00 | 5.97 | 0.97 | 5.00 |
| 23 | ಸ್ಟಾಂಡರ್ಡ್ ಅಸೆಟ್ಸ್ ಕಾದರಿಸಿದ್ದು | 10.00 | 1.00 | -9.00 | 10.00 |
| 24 | ಹೂಡಿಕೆಗಳ ಸವಕಳಿ ನಿಧಿಗೆ ಕಾದರಿಸಿದ್ದು | 0.50 | 0.07 | -0.43 | 0.50 |
| 25 | ಆದಾಯ ತೆರಿಗೆ ಪಾವತಿಸಿದ್ದು | 20.00 | 18.38 | -1.62 | 20.00 |
| 26 | ಗೃಹಸಾಲದ ಬಡ್ಡಿ ಆದಾಯದಿಂದ ಆದಾಯ ತೆರಿಗೆ ಕಾಯ್ದೆ ನಿಯಮ 36(1)(8)ರ ಪ್ರಕಾರ ಆದಾಯತೆರಿಗೆ ರಿಯಾಯಿತಿಗಾಗಿ ಕರಡು ಸಾಲ ನಿಧಿಗೆ ಕಾದರಿಸಿದ್ದು | 15.00 | 11.55 | -3.45 | 15.00 |
| 27 | ಪಿಗ್ಮಿ ಏಜೆಂಟ್ ಕಮೀಷನ್ | 25.00 | 12.09 | -12.91 | 25.00 |
| 28 | ಕ್ಯಾಲೆಂಡರ್ ವೆಚ್ಚ್ | 2.00 | 0.40 | -1.60 | 2.00 |
| 29 | ಬ್ಯಾಂಕ್ ವೆಚ್ಚಗಳು | 2.00 | 0.15 | -1.85 | 2.00 |
| 30 | ವಿದ್ಯುತ್ ವೆಚ್ಚಗಳು | 5.00 | 2.56 | -2.44 | 5.00 |
| 31 | ಶಾಖೆಗಳಿಗೆ/ಪ್ರಧಾನ ಕಛೇರಿಗೆ ಬಡ್ಡಿ ಪಾವತಿಸಿದ್ದು | 30.00 | 32.66 | 2.66 | 40.00 |

| | | | | | |
|---|---|---|---|---|---|
| 32 | ಪೂಜಾ ವೆಚ್ಚ | 3.00 | 1.74 | -1.26 | 3.00 |
| 33 | ಸೆಕ್ಯೂರಿಟಿ ಗಾರ್ಡ್ ವೆಚ್ಚ | 5.00 | 3.19 | -1.81 | 5.00 |
| 34 | ಕಛೇರಿ ಸ್ವಚ್ಛತಾ ವೆಚ್ಚ | 1.00 | 0.78 | -0.22 | 1.00 |
| 35 | ಜಿಎಸ್‌ಟಿ ಖರ್ಚು | 5.00 | 2.98 | -2.02 | 5.00 |
| 36 | ಸಿಐಸಿ ಶುಲ್ಕ | 1.00 | 0.24 | -0.76 | 1.00 |
| 37 | ಸಿಬ್ಬಂದಿ ಭವಿಷ್ಯ ನಿಧಿ | 8.00 | 6.69 | -1.31 | 8.00 |
| 38 | ಕಛೇರಿ ನಿರ್ವಹಣಾ ವೆಚ್ಚ | 2.00 | 1.35 | -0.65 | 2.00 |
| 39 | ಸಿಬ್ಬಂದಿ ಭತ್ಯೆಗಳು | 1.00 | 0.49 | -0.51 | 1.00 |
| 40 | ಮುಂಗಡ ಆದಾಯ ತೆರಿಗೆ | 150.00 | 87.00 | -63.00 | 120.00 |
| 41 | ಟಿಡಿಎಸ್ ಫೈಲಿಂಗ್ ವೆಚ್ಚ | 1.00 | 0.26 | -0.74 | 1.00 |
| 42 | ಕಾನೂನು ವೆಚ್ಚಗಳು | 2.00 | 0.00 | -2.00 | 2.00 |
| 43 | ಎನ್‌ಪಿಸಿಐ ಶುಲ್ಕ ಮತ್ತು ಎಟಿಎಂ ಕಾರ್ಡ್ ಶುಲ್ಕ | 3.00 | 0.00 | -3.00 | 3.00 |
| 44 | ಎಸ್.ಎಂ.ಎಸ್ ಶುಲ್ಕ | 0.50 | 0.00 | -0.50 | 0.50 |
| | **ಒಟ್ಟು ಖರ್ಚುಗಳು** | 1256.00 | 1068.86 | -187.14 | 1266.00 |

2020-2021ನೇ ಸಾಲಿನಲ್ಲಿ ಆಯ-ವ್ಯಯ ಪಟ್ಟಿಯಲ್ಲಿ ಅಂದಾಜು ಮಾಡಿದಂತಹ ಖರ್ಚುಗಳಲ್ಲಿ ವಿವಿದ ತರಹೆಯಾದ ಖರ್ಚುಗಳು ಹೆಚ್ಚಾಗಿ ಆಗಿರುವುದರಿಂದ ಸಭೆಯು ಹೆಚ್ಚಿಗೆ ಆದಂತಹ ಖರ್ಚು ವೆಚ್ಚಗಳನ್ನು ಹಾಗೂ 2021-2022ನೇ ಸಾಲಿಗೆ ತಯಾರಿಸಿರುವ ಅಂದಾಜು ಆಯ-ವ್ಯಯದ ಪಟ್ಟಿಯನ್ನು ವಿಷಯ 9 ನ್ನು ಅನುಮೋಧನೆಗಾಗಿ ಸಭೆಯನ್ನು ಕೋರಿದರು. ಸದಸ್ಯರಾದ ಶ್ರೀ ಹಾಲೇಶ್ ರವರು ವಿಷಯಗಳನ್ನು ಒಪ್ಪಬಹುದೆಂದು ಸೂಚಿಸಿದರು. ಶ್ರೀ.ರವಿ.ಟಿ.ಜಿ  ರವರು ಅನುಮೋದಿಸಿದರು.

ನಂತರ ಸಭೆಯು ವಿಷಯ ಸೂಚಿ 10 ನ್ನು ಅನುಮೋದನೆಗಾಗಿ ಮಂಡಿಸಿತು. ಸದಸ್ಯರಿಗೆ ಶೇ.15 ರಂತೆ ಷೇರು ಡಿವಿಡೆಂಡನ್ನು ಹಂಚಿಕೆಮಾಡಿದ್ದು ಈ ಕೆಳಕಂಡಂತೆ ಲಾಭವಿಲೇವಾರಿಯನ್ನು ಮಾಡಲು ಸರ್ವಾನುಮತದಿಂದ ಅನುಮೋದಿಸಿತು.

| ಕ್ರ.ಸಂ. | ವಿವರಗಳು | ಶೇ. | 2020-2021ನೇ ಸಾಲಿನ ನಿವ್ವಳ ಲಾಭ ಹಂಚಿಕೆ. ರೂ |
|---|---|---|---|
| 1 | ಆಪದ್ಧನ ನಿಧಿ | 25% | 83,31,104.43 |
| 2 | ಸಹಕಾರ ಶಿಕ್ಷಣ ನಿಧಿ- ಸರ್ಕಾರಕ್ಕೆ | 2% | 4,97,993.00 |
| 3 | ಸಹಕಾರ ಶಿಕ್ಷಣ/ಅಭಿವೃದ್ಧಿ ನಿಧಿ -ಅರ್ಬನ್ ಫೆಡರೇಷನ್ | 1% | 2,48,997.00 |
| 4 | ಕರಡು ಸಾಲದ ನಿಧಿ | 10% | 24,00,000.00 |
| 5 | ಕಟ್ಟಡ ನಿದಿ | 20% | 47,00,000.00 |
| 6 | ಸದಸ್ಯರ ಕ್ಷೇಮ ನಿಧಿ | 10% | 24,00,000.00 |
| 7 | ಧರ್ಮದ ನಿಧಿ | 5% | 12,00,000.00 |
| 8 | ಲಾಭಾಂಶ ಸಮೀಕರಣ ನಿಧಿ | 5% | 12,00,000.00 |
| 9 | ಸಿಬ್ಬಂದಿ ಬೋನಸ್ಸು/ಎಕ್ಸ್‌ಗ್ರೇಷಿಯಾ | 2% | 6,25,000.00 |
| 10 | ಜೂಬಿಲಿ ನಿಧಿ | 5% | 12,00,000.00 |
| 11 | ಲಾಭಾಂಶ (Dividend) | 15% | 1,03,96,467.00 |
| | **ಒಟ್ಟು** | | 3,31,99,561.43 |

ಸದಸ್ಯರಾದ ಶ್ರೀ.ಸತ್ಯನಾರಾಯಣ  ರವರು ವಿಷಯಗಳನ್ನು ಒಪ್ಪಬಹುದೆಂದು ಸೂಚಿಸಿದರು. ಶ್ರೀ.ಚಿಕ್ಕವೆಂಕಟಯ್ಯ ರವರು ಅನುಮೋದಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶೀಮತಿ. ಉಷಾರಾಣಿರವರು ಸರ್ವಸದಸ್ಯರ ಸಭೆಗೆ ಹಾಜರಾದ ಸರ್ವರಿಗೂ ವಂದನಾರ್ಪಣೆಯನ್ನು ಸೂಚಿಸಿ ಸರ್ವಸದಸ್ಯರ ಸಭೆಯನ್ನು ಮುಕ್ತಾಯಗೊಳಿಸಿದರು.

ಸ್ಥಳ : ಬೆಂಗಳೂರು
ದಿನಾಂಕ : 31-10-2021

**ಸಹಿ/-**
**(ಸೊಣ್ಣೇಗೌಡ.ಎನ್.ಎಂ)**
**ಅಧ್ಯಕ್ಷರು**